**ದಿನಾಂಕ 13.12.2024 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ ಶ್ರೀ ಬಿ.ಜಿ.ಆರ್. ವಕೀಲರಿಂದಃ**

1. ನನ್ನ ತಾಯಿಯ ಹೆಸರು ಸಣ್ಣಮ್ಮ, ಸದರಿಯವರು ತೀರಿಕೊಂಡು ಸುಮಾರು 5-6 ವರ್ಷಗಳು ಆಗಿವೆ. ನನ್ನ ತಂದೆ ತೀರಿಕೊಂಡು ಸುಮಾರು 10 ವರ್ಷಗಳು ಆಗಿವೆ. ಅವರಿಬ್ಬರ ಆಧಾರ್ ಕಾರ್ಡ್ ಮತ್ತು ನನ್ನ ಆಧಾರ್ ಕಾರ್ಡ್ ಇದೆ. ಸದರಿ ಆಧಾರ್ ಕಾರ್ಡ್ ಗಳನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ನನ್ನ ತಂದೆಯ ಹೆಸರಿಗೆ ಸರ್ವೆ ನಂ. 35/10 ರಲ್ಲಿ 29 ಗುಂಟೆ ಜಮೀನು ಇದೆ, ನನ್ನ ತಾಯಿಯ ಸೋದರ ಮಾವ ಖರೀದಿಗೆ ಕೊಟ್ಟಿರುತ್ತಾರೆ, ಸದರಿ ಆಸ್ತಿಗೂ ದಾವಾ ಆಸ್ತಿಗೂ ಯಾವುದೇ ಸಂಬಂಧವಿಲ್ಲ. ಸದರಿ ಅಸ್ತಿ ಮತ್ತು ಮೂಲ ದಾಖಲಾತಿಯಾದ ಕ್ರಯ ಪತ್ರ ನಮ್ಮ ಬಳಿಯೇ ಇದೆ . ಸದರಿ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿಯು ಈಗಾಗಲೇ ಹಾಜರುಪಡಿಸಿರುತ್ತೇವೆ ಎಂದು ನುಡಿಯುತ್ತಾರೆ. ನಾನು ಇಲ್ಲಿಯವರೆಗೂ ತಹಶೀಲ್ದಾರರಿಂದ ಪಡೆದ ವಂಶವೃಕ್ಷವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.
2. ನಮ್ಮ ವಕೀಲರು ಹಾಜರುಪಡಿಸಿರುವ ದಾಖಲಾತಿಯಲ್ಲಿ ಸದರಿ ವಂಶವೃಕ್ಷ ಇಲ್ಲ ಎಂದರೆ ಸಾಕ್ಷಿಯು ನಾನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ನಾನು ವಕೀಲರಿಂದ ಒಂದು ವಂಶವೃಕ್ಷವನ್ನು ಓ.ಎಸ್.130/2000 ರ ದಾವೆಯಲ್ಲಿ ಬರೆಸಿದ್ದೇನೆ ಎಂದರೆ ಸರಿ. ನಿ.ಡಿ. 12 ರ ವಂಶವೃಕ್ಷವನ್ನು ಹೊರತುಪಡಿಸಿ, ತಹಶೀಲ್ದಾರರಿಂದ ಪಡೆದ ಯಾವುದೇ ವಂಶವೃಕ್ಷವನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಓ.ಎಸ್.130/2000 ರ ದಾವೆಯಲ್ಲಿ ಗ್ರಾಮಲೆಕ್ಕಾಧಿಕಾರಿಗಳಿಂದ ವಂಶವೃಕ್ಷವನ್ನು ಪಡೆದು ಹಾಜರುಪಡಿಸಿದ್ದೇವೆ. ಸದರಿ ದಾವೆಯಲ್ಲಿ ನಾನು ವಕೀಲರಿಂದ ವಂಶವೃಕ್ಷವನ್ನು ಬರೆಸಿ ಹಾಕಿದ್ದೇವೆ ಎಂದರೆ ಸರಿ. ಎರಡೂ ವಂಶವೃಕ್ಷವನ್ನೂ ಸದರಿ ದಾವೆಯಲ್ಲಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಸಲ್ಲಿಸಿದ್ದೇವೆ ಎಂದು ನುಡಿಯುತ್ತಾರೆ.
3. ಓ.ಎಸ್.130/2000 ರ ದಾವೆಯಲ್ಲಿ ವಾದಿ ಗಣೇಶ್ ರವರು ನ್ಯಾಯಾಲಯದಿಂದ ಸಮನ್ಸ್ ಪಡೆದಿಲ್ಲ ಎಂದರೆ ಸಾಕ್ಷಿಯು ನಾವು ಕಳುಹಿಸಿದ್ದೆವು ಆದರೆ ಅವರು ಕೆಲಸಕ್ಕಾಗಿ ಹೊರಗಡೆ ವಲಸೆ ಹೋಗಿದ್ದರು ಎಂದು ನುಡಿಯುತ್ತಾರೆ. ಸದರಿ ನೊಟೀಸ್ ಗೆ ಅವರ ತಾಯಿ

ಕರಿಯಮ್ಮ ಸಹಿ ಮಾಡಿ ತೆಗೆದುಕೊಂಡಿದ್ದರು. ನ್ಯಾಯಾಲಯದಿಂದ ಸಮನ್ಸ್ ಜಾರಿಯಾಗಿದೆ. ವಾದಿ ತಮ್ಮ ಹನುಮಂತಯ್ಯ ಎಂದರೆ ಸರಿ. ನಿ.ಪಿ.18 ರ ನೋಟೀಸ್ ನ್ನು ಕರಿಯಮ್ಮ ಮತ್ತು ಗಣೇಶ್ ರವರ ಪರವಾಗಿ ಹನುಮಂತಯ್ಯನವರು ನೋಟೀಸ್ ಪಡೆದಿದ್ದಾರೆ ಎಂದರೆ ಸರಿ. ಗಣೇಶ್ ರವರಿಗೆ ಓ.ಎಸ್.130/2000 ರ ದಾವೆಯ ಬಗ್ಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ಅವರಿಗೆ ಗೊತ್ತಿದ್ದರೂ ಗೊತ್ತಿಲ್ಲ ಎಂದು ನುಡಿಯುತ್ತಾರೆ.

4. ಓ.ಎಸ್.130/2000 ರ ದಾವೆಯ ನಂತರ ಎಫ್.ಡಿ.ಪಿ. 10/2006 ರಂತೆ ಅರ್ಜಿ ಸಲ್ಲಿಸಿದ್ದೆವು ಎಂದರೆ ಸರಿ. ಅದರಲ್ಲೂ ನೋಟೀಸ್ ಕಳುಹಿಸಿದ್ದೆವು. ಸದರಿ ನೋಟೀಸ್ ಕಾಪಿ ಈಗಲೂ ಸಿಗುತ್ತದೆ ಎಂದರೆ ಸರಿ. ಸದರಿ ಎಫ್.ಡಿ.ಪಿ. 10/2006 ರ ಅರ್ಜಿಯಲ್ಲಿ ವಾದಿ ಗಣೇಶ್ ರವರಿಗೆ ನೋಟೀಸ್ ಜಾರಿಯಾಗಿತ್ತಾ ಎಂದರೆ ಸಾಕ್ಷಿಯು ಗಣೇಶ್ ಇರದೇ ಇರುವ ಕಾರಣ ಅವರ ತಾಯಿ ನೋಟೀಸ್ ಸ್ವೀಕರಿಸಿರುತ್ತಾರೆ. ಸದರಿ ನೋಟೀಸ್ ದೃಢೀಕೃತ ಕಾಪಿಗಳನ್ನು ನ್ಯಾಯಾಲಯದಿಂದ ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿಯು ನಾವು ಅದನ್ನು ತಂದುಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. ನಾನು ಸಲ್ಲಿಸಿರುವ ದಾಖಲಾತಿಗಳಲ್ಲಿ ಸದರಿ ಅರ್ಜಿಯ ನೋಟೀಸ್ ಗಳು ಇರುವುದಿಲ್ಲ ಎಂದರೆ ಸಾಕ್ಷಿಯು ವಕೀಲರ ಮುಖಾಂತರ ಸಲ್ಲಿಸಿದ್ದೇವೆ ಎಂದು ನುಡಿಯುತ್ತಾರೆ. ಎಫ್.ಡಿ.ಪಿ. 10/2006 ಮತ್ತು ಓ.ಎಸ್.130/2000 ರ ಕೇಸುಗಳ ಬಗ್ಗೆ ಗಣೇಶ್ ರವರಿಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ಅವರು ವಲಸೆ ಹೋಗಿದ್ದು, 2 ವರ್ಷಗಳಾದರೂ ಮನೆಗೆ ಬಂದಿರುವುದಿಲ್ಲ, ನಾನು ನನ್ನ ಕೈಲಾದ ಪ್ರಯತ್ನ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

5. ತಿಮ್ಮಾಭೋವಿ ಹೆಂಡತಿ 1 ನೇ ಪ್ರತಿವಾದಿ ಕರಿಯಮ್ಮ ನಮ್ಮ ಗ್ರಾಮದವರು ಎಂದರೆ ಸರಿ. ಓ.ಎಸ್.130/2000 ದಾವೆ ಹಾಕುವಾಗ ಪಹಣಿಯಲ್ಲಿ ಕರಿಯಮ್ಮನವರ ಹೆಸರು ಇತ್ತು ಎಂದರೆ ಸಾಕ್ಷಿಯು ನಾವು ಸಲ್ಲಿಸುವ ಕಾಲಕ್ಕೆ ಹೆಸರು ಇರಲಿಲ್ಲ ಎಂದು ನುಡಿಯುತ್ತಾರೆ. ನಾನು ಅವಿದ್ಯಾವಂತ. ನಾವು ದಾವೆ ಸಲ್ಲಿಸುವ ಕಾಲಕ್ಕೆ 6 ಎಕರೆ 11 ಗುಂಟೆ ಇತ್ತು ಎಂದರೆ ಸಾಕ್ಷಿಯು 7 ಎಕರೆ 11 ಗುಂಟೆ ಇತ್ತು ಎಂದು ನುಡಿಯುತ್ತಾರೆ. ಓ.ಎಸ್.130/2000 ದಾವೆಯು 28.05.2005 ರಲ್ಲಿ ತೀರ್ಮಾನವಾಗಿರುತ್ತದೆ ಎಂದರೆ ಸಾಕ್ಷಿಯು ತೀರ್ಮಾನವಾಗಿ ಅಂತಿಮ

ಡಿಕ್ರಿಯಾಗಿ ನಾವು ಖಾತೆ ಪಹಣಿ ಮಾಡಿಸಿಕೊಂಡು, ಬದಲಾವಣೆ ಮಾಡಿಕೊಂಡು ಹದ್ದುಬಸ್ತು ಮಾಡಿಸಿಕೊಂಡು ಸ್ವಾಧೀನದಲ್ಲಿ ಇದ್ದೇವೆ ಎಂದು ನುಡಿಯುತ್ತಾರೆ. 21.10.2004 ರಲ್ಲಿ ನಿ.ಡಿ.7 ರಂತೆ ನನ್ನ ತಂದೆಯಿಂದ ಎಸ್.ಪಿ.ಎ ನ್ನು ಪಡೆದುಕೊಂಡಿದ್ದೆನು ಎಂದರೆ ಸರಿಯಲ್ಲ. ಸದರಿ ಕಾಲಕ್ಕೆ ನಮಗೆ ಸರ್ವೆ ನಂ. 35/2 ರ ಕಂಪ್ಯೂಟರ್ ಪಹಣಿ ಪತ್ರಿಕೆ ಸಿಗುತ್ತಿತ್ತು ಎಂದರೆ ಸರಿ. ಸದರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

6. ಸದರಿ ದಾವೆಯಲ್ಲಿ ಕರಿಯಮ್ಮನನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಅವರ ಬಗ್ಗೆ ನನಗೆ ಏನೂ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ಎಫ್.ಡಿ.ಪಿ. 10/2006 ಅರ್ಜಿ ಸಲ್ಲಿಸುವ ಕಾಲಕ್ಕೆ ಎಲ್ಲಾ ಪಹಣಿಗಳನ್ನು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿದ್ದೇವೆ ಎಂದು ನುಡಿಯುತ್ತಾರೆ. ಸದರಿ ಪಹಣಿ ಪತ್ರಿಕೆಗಳಲ್ಲಿ ಕರಿಯಮ್ಮ ಮತ್ತು ತಿಮ್ಮಾಭೋವಿಯ ಹೆಸರು ಇತ್ತು ಎಂದರೆ ಸರಿಯಲ್ಲ. ನನಗೆ ನಿ.ಡಿ.10 ರ ವಿಲ್ ಪತ್ರ ಎಲ್ಲಿ ಸಿಕ್ಕಿದೆ ಎಂದರೆ ಸಾಕ್ಷಿಯು ಬುಕ್ಕಾಪಟ್ಟಣ ಹೋಬಳಿಯ ನಾಡ ಕಛೇರಿಯಿಂದ ಪಡೆದುಕೊಂಡು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ದಾವೆಯನ್ನು ಸಲ್ಲಿಸುವ ಎಷ್ಟು ದಿನಗಳ ಪೂರ್ವದಲ್ಲಿ ವಂಶವೃಕ್ಷವನ್ನು ಪಡೆದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು 2002 ರಲ್ಲಿ ಪಡೆದುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ.

7. ನಿ.ಡಿ.10 ರ ದಾಖಲಾತಿಯನ್ನು ಪಡೆದಿರುವ ಬಗ್ಗೆ ಯಾವುದೇ ಕಛೇರಿಯ ಸೀಲು ಮತ್ತು ಸಹಿ ಇಲ್ಲ ಎಂದರೆ ಸಾಕ್ಷಿಯು ಬುಕ್ಕಾಪಟ್ಟಣ ಹೋಬಳಿಯ ನಾಡ ಕಛೇರಿಯಿಂದ ಪಡೆದುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ವಾದಿಗಳಿಗೂ ನಮಗೂ ಯಾವುದೇ ರಕ್ತಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸದರಿ ಸಂಬಂಧವನ್ನು ತೋರಿಸಲು ಯಾವುದೇ ಮೂಲ ನೊಂದಣಿ ದಾಖಲಾತಿಯನ್ನು ಮತ್ತು ತಹಶೀಲ್ದಾರರಿಂದ ವಂಶವೃಕ್ಷವನ್ನು ಪಡೆದು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ, ಎಲ್ಲಾ ದಾಖಲಾತಿಗಳನ್ನು ಹಾಜರುಪಡಿಸಿದ್ದೇವೆ ಎಂದು ನುಡಿಯುತ್ತಾರೆ. ವಾದಿಗಳ ಜಮೀನುಗಳನ್ನು ಕಬಳಿಸುವ ಉದ್ದೇಶದಿಂದ ಸದರಿ ದಾವೆಗಳನ್ನು ತಂದಿದ್ದೇನೆ ಎಂದರೆ ಸರಿಯಲ್ಲ. ನಾವು ಅಣ್ಣ ತಮ್ಮಂದಿರು ನ್ಯಾಯಾಲಯದ ಮುಖಾಂತರ ಭಾಗ ತೆಗೆದುಕೊಂಡಿದ್ದೇವೆ ಎಂದು ಸಾಕ್ಷಿ ಮುಂದುವರೆದು ನುಡಿಯುತ್ತಾರೆ. ಆರ್ಬೆಳ್ ತಿಮ್ಮಾಭೋವಿ ನಮ್ಮ ತಾತ ಎಂದು ತೋರಿಸಲು ಮತ್ತು ಆತನ ಮೂರು ಜನ ಮಕ್ಕಳಾದ

ಆರ್ಬೆಳ್ ತಿಮ್ಮಾಭೋವಿ, ಆರ್ಬೆಳ್ ಕುಂಟರಾಮಭೋವಿ ಮತ್ತು ಆರ್ಬೆಳ್ ಎಲ್ಲಾಭೋವಿ ಯವರ ಮರಣ ಸಮರ್ತನ ದಾಖಲಾತಿಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸದರಿಯವರ ಜಮೀನನ್ನು ಕಬಳಿಸುವ ಉದ್ದೇಶದಿಂದ ನ್ಯಾಯಾಲಯಕ್ಕೆ ಸುಳ್ಳು ದಾಖಲಾತಿಗಳನ್ನು ನೀಡಿ ಮೋಸದಿಂದ ಡಿಕ್ರಿಯನ್ನು ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ, ಅವರೇ ನಮಗೆ ಸುಳ್ಳು ವಿಲ್ ನಾಮೆ ತಯಾರಿಸಿ ಮೋಸ ಮಾಡಲು ಪ್ರಯತ್ನ ಪಟ್ಟಿದ್ದರು ಎಂದು ನುಡಿಯುತ್ತಾರೆ.

8. ನಾನು ಖಾತೆ ಮಾಡಿಸಿಕೊಂಡು ಗಣೇಶ್ ರವರ ಜಮೀನಿಗೆ ತೊಂದರೆ ಕೊಡಲು ಹೋದಾಗಲೇ ಅವರಿಗೆ ಓ.ಎಸ್.130/2000 ರ ವಿಚಾರ ಗೊತ್ತಾಗಿದೆ ಎಂದರೆ ಸಾಕ್ಷಿಯು ಅವರಿಗೆ ನೊಟೀಸ್ ಕೊಡಲು ಹೋದಾಗ ಅವರು ಊರು ಬಿಟ್ಟು ವಲಸೆ ಹೋಗಿದ್ದರು ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಮೇಲೆ ನನಗೆ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**